



ಹೆಚ್ಚಿನ ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರಕ್ಕೆ ಸಂಪರ್ಕಿಸಿರಿ.


**ಗೌರಿಶಂಕರ ಸಜ್ಜನರ**
ತಾಲೂಕು ತಾಂತ್ರಿಕ ವ್ಯವಸ್ಥಾಪಕರು
ಆತ್ಮ ಯೋಜನೆ, ಮುಂಡರಗಿ ತಾಲೂಕು

**ಸುಶ್ಮಿತಾ ಹೆಬಸೂರ**
ಸಹಾಯಕ ತಾಂತ್ರಿಕ ವ್ಯವಸ್ಥಾಪಕರು
ಆತ್ಮ ಯೋಜನೆ, ಮುಂಡರಗಿ ತಾಲೂಕು

**ಎಸ್. ಬಿ. ನೆಗಳೂರ**
ಸಹಾಯಕ ಕೃಷಿ ನಿರ್ದೇಶಕರು
ಮುಂಡರಗಿ

**ಸಹದೇವ ಯರಗೊಪ್ಪ**
ಉಪ ಕೃಷಿ ನಿರ್ದೇಶಕರು-1,
ಗದಗ

**ಸಿ. ಬಿ. ಬಾಲರಡ್ಡಿ**
ಜಂಟಿ ಕೃಷಿ ನಿರ್ದೇಶಕರು,
ಗದಗ


ಕೃಷಿ ಇಲಾಖೆ ಗದಗ

ಜಿಲ್ಲಾ ಪಂಚಾಯತ ಗದಗ

# ಸಾವಯವ ಸಿರಿ

## ಯಶೋಗಾಥೆ



ಸಹಾಯಕ ಕೃಷಿ ನಿರ್ದೇಶಕರು, ಮುಂಡರಗಿ

# ಸಾವಯವ ಸಿರಿ

## ಯಶೋಗಾಥೆ....

ಮುಂಡರಗಿ ತಾಲೂಕಿನ ಡಂಬಳ ಗ್ರಾಮದ ನಿವಾಸಿಗಳಾದ ಶ್ರೀ ಬಸವರಾಜ ಲಿಂಗಬಸಪ್ಪ ಪ್ಯಾಟಿ ಇವರು ಕೃಷಿಗೆ ಮಾಡುವ ಖರ್ಚು ವೆಚ್ಚವನ್ನು ಕಡಿಮೆಗೊಳಿಸಿ ಹೆಚ್ಚು ಉತ್ಪಾದನೆ ಗುರಿಯನ್ನು ಹೊಂದಲು ಸುಭಾಸ ಪಾಳೇಕರವರ 4 ದಿನಗಳ ತರಬೇತಿ ಕಾರ್ಯಕ್ರಮ ಹಾಗೂ ಅವರು ಬರೆದ ಶೂನ್ಯ ಬಂಡವಾಳದಲ್ಲಿ ಬೇಸಾಯ ಪುಸ್ತಕ ಇವರಿಗೆ ಪ್ರೇರಕವಾಗಿದೆ.

ಇವರು ಮುಂಡರಗಿ ತಾಲೂಕ ಡಂಬಳ ಗ್ರಾಮದ ಸಾವಯವ ಕೃಷಿಕರು ಮತು ಔಷಧಿ ಸಸ್ಯಗಳ ಸುಗಂಧ ದ್ರವ್ಯ ಬೆಳೆಗಾರರ ಸಂಘದಲ್ಲಿ ಸಹಕಾರ್ಯದರ್ಶಿಯಾಗಿದ್ದಾರೆ. ಸತತ 11 ವರ್ಷಗಳಿಂದ ಸಾವಯವ ಪದ್ದತಿ ಅನುಸರಿಸಿದ್ದು. ಇವರು ಉತ್ಪಾದಿಸಿದ ಉತ್ಪನ್ನಗಳನ್ನು ಜೈವಿಕ ಸೂಸೈಟಿ, ಬೆಂಗಳೂರ ಹಾಗೂ ಸಾವಯವ ಕೃಷಿ ಕೇಂದ್ರ, ನೆಲಮಂಗಲ ಸಂಸ್ಥೆಗಳೊಂದಿಗೆ ವಹಿವಾಟು ಮಾಡುತ್ತಿದ್ದಾರೆ.

ಸಾವಯವ ಕೃಷಿ ಎಂದರೆ ಪ್ರಕೃತಿದತ್ತವಾದ ಕೃಷಿ ಸಂಪನ್ಮೂಲಗಲ್ಲಿ ಒಂದಾದ ಮಣ್ಣನ್ನು ಜೀವಂತವಾಗಿಟ್ಟುಕೂಂಡು ಮಣ್ಣಿನ ಆರೋಗ್ಯವನ್ನು ಕಾಪಾಡಿಕೂಂಡು ಬೆಳೆ ಉತ್ಪಾದನೆ ಮಾಡುವ ವಿಧಾನವಾಗಿದೆ. ಬೆಳೆಯ ಆವರ್ತನೆ, ಹಸಿರು ಗೊಬ್ಬರ, ಜೈವಿಕ ಪದ್ಧತಿಗಳ ಮೂಲಕ ಕೀಟಗಳ ನಿಯಂತ್ರಣ ಅವಲಂಬಿಸಿರುವ ಸಾವಯವ ಬೇಸಾಯವು ಮಣ್ಣಿನ ತಯಾರಿಕೆಯ ಸಾಮರ್ಥ್ಯವನ್ನು ಸರಿದೂಗಿಸುವಲ್ಲಿ ಮತ್ತು ಕೀಟಗಳನ್ನು ನಿಯಂತ್ರಿಸುವಲ್ಲಿ ಸಹಕಾರಿಯಾಗಲಿದೆ.

ಬಸವರಾಜ ಪ್ಯಾಟಿ ಇವರು 2006 ರಿಂದ ಅವರ ಜಮೀನಿನಲ್ಲಿ ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕ ಔಷಧಿಗಳ ಬಳಕೆಯನ್ನು ನಿಲ್ಲಿಸಿದ್ದಾರೆ. ಮೊದಲನೆಯ ವರ್ಷ ಸಾವಯವ ಕೃಷಿಯನ್ನು ಆರಂಬಿಸಿದಾಗ ಇಳುವರಿ ಕಡಿಮೆಯಾಗಿ ಪ್ರತಿ ಎಕರೆಗೆ ಕೇವಲ ಮೂರು ಚೀಲ ಜೋಳ ಮಾತ್ರ ಉತ್ಪಾದಿಸಲು ಸಾಧ್ಯವಾಯಿತು. ಎರಡನೆ ವರ್ಷದಲ್ಲಿ ಏಳು ಚೀಲ, ಮೂರನೆ ವರ್ಷದಲ್ಲಿ ಹನ್ನೊಂದು ಚೀಲ ಇಳುವರಿ ಪಡೆಯಲಾಯಿತು ಎಂದು ಅನುಭವ ಹಂಚಿಕೊಂಡರು. ಇದೆ ರೀತಿ ಬದನೆ ಬೆಳೆಯಲ್ಲಿ ಕಂಡುಬರುವ ಕಾಂಡ ಕೊರಕ ಕೀಟದ ನಿರ್ವಹಣೆಗಾಗಿ ವಿವಿಧ ಕೀಟನಾಶಕಗಳನ್ನು ಬಳಸಿ ಯಾವುದೇ ಹತೋಟಿ ಕಾಣದೆ ಇರುವುದರಿಂದ ಜೀವಾಮೃತಕ್ಕೆ ಮೊರೆ ಹೋಗಿ ಜೀವಾವೃತ ಬಳಕೆಯಿಂದ ಕೀಟಗಳು ಹತೋಟಿಗೆ ಬಂದುದ್ದರಿಂದ, ಜೀವಾಮೃತ ಬಳಕೆಯನ್ನು ಆರಂಭಿಸಿದರು. ಒಂದು ಎಕರೆ ಬದನೆ ಬೆಳೆಯಲ್ಲಿ ಒಟ್ಟು ಎಲ್ಲಾ ಖರ್ಚು ತಗೆದು 50 ಸಾವಿರ ರೂಪಾಯಿ ಆದಾಯ ಗಳಿಕೆಯಾಯಿತು ಎಂದು ತಿಳಿಸಿದರು.

ಇವರು ಒಟ್ಟು ಕ್ಷೇತ್ರ 14.2 ಎಕರೆ ಇದ್ದು, ಅದರಲ್ಲಿ ಇವರು ತಮ್ಮ 10.09 ಎಕರೆ ಜಮೀನನ್ನು ಸಂಪೂರ್ಣವಾಗಿ ಸಾವಯವಕ್ಕೆ ಪರಿವರ್ತಿಸಿದ್ದಾರೆ. ಸದರಿ ಜಮೀನಿನಲ್ಲಿ ತರಕಾರಿ ಹಾಗೂ ಇತರೆ ದಾನ್ಯಗಳನ್ನು ಬೆಳೆಯುತ್ತಿದ್ದಾರೆ, ಪ್ರತಿ ವರ್ಷ ಉಳ್ಳಾಗಡ್ಡಿ ಬೀಜೊತ್ಪಾದನೆ ಮಾಡುತ್ತಿದ್ದು, 2017-18 ನೇ ಸಾಲಿನಲ್ಲಿ ಗದಗ ಜಿಲ್ಲೆಯಲ್ಲಿ ಆತ್ಮ ಯೋಜನೆಯಡಿ ಹಮ್ಮಿಕೊಂಡ ಹಲವಾರು ಸಿರಿಧಾನ್ಯಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಿರಿಧಾನ್ಯಗಳ ವ್ಯವಸಾಯ ಮತ್ತು ಆರೋಗ್ಯದಲ್ಲಿ ಅವುಗಳ ಮಹತ್ವದ ಬಗ್ಗೆ





ಅರಿತು, ಸಿರಿಧಾನ್ಯಗಳಾದ ಬರಗು, ರಾಗಿ, ಉದಲು, ನವಣೆ ಹಾಗೂ ಕೊರಲೆಗಳನ್ನು ಬೆಳೆಯುತ್ತಿದ್ದಾರೆ. ಆರಂಭದಲ್ಲಿ ಕೃಷಿ ಸಂಶೋಧನಾ ಕೇಂದ್ರ ಗದಗ ಇವರಿಂದ ಪ್ರಾತ್ಯಕ್ಷತೆಗಾಗಿ ಬೆಳೆದು, ಸಧ್ಯ ತಾವೆ ದೊಡ್ಡ ಪ್ರಮಾಣದಲ್ಲಿ ವಿವಿಧ ಸಿರಿಧಾನ್ಯಗಳನ್ನು ಉತ್ಪಾದಿಸಿ ಮಾರಾಟ ಮಾಡುತ್ತಿದ್ದಾರೆ.

ಜೀವಾಮೃತವನ್ನು ತಯಾರಿಸಿ ಬೆಳೆಗಳ ಸಿಂಪರಣೆಗಾಗಿ ಉಪಯೋಗಿಸುತ್ತಿದ್ದಾರೆ, ಜೀವಾಮೃತವನ್ನು 18 ಲೀಟರ್ ನೀರಿಗೆ 1 ಲೀಟರ್ ಜೀವಾಮೃತ ಬೇರೆಸಿ ನೀರಾವರಿ ಮೂಲಕ ಬೆಳೆಗಳಿಗೆ ಒದಗಿಸುತ್ತಿದ್ದಾರೆ. ಜೀವಾಮೃತವನ್ನು ತಿಪ್ಪೆ ಗೊಬ್ಬರದೊಂದಿಗೆ ಬೆರೆಸಿ ಘನಾಮೃತವಾಗಿ ಮಣ್ಣಿಗೆ ಸೇರಿಸಲು ಇವರ ಪ್ರಯತ್ನ ನಿರಂತರವಾಗಿದೆ. ತಿಪ್ಪೆ ಗೊಬ್ಬರದೊಂದಿಗೆ ರಂಜಕ ಕರಗಿಸುವ ಅಣು ಜೀವಿ ಗೊಬ್ಬರವನ್ನು ಸೇರಿಸಿ ತಮ್ಮ ಜಮೀನುಗಳಿಗೆ ಬಳಕೆ ಮಾಡುತ್ತಿದ್ದುದ್ದರಿಂದ ರಂಜಕದ ಕೊರತೆಯನ್ನು ನಿಗಿಸಲಾಗಿದೆಂದು ತಮ್ಮ ಜಮೀನುಗಳಲ್ಲಿ ಕಂಡುಕೊಂಡ ಅನುಭವವನ್ನು ಗ್ರಾಮದ ರೈತರಿಗೆ ಮಾಹಿತಿಯನ್ನು ಹಂಚಿಕೊಳ್ಳುತ್ತಿದ್ದಾರೆ. ರಾಸಾಯನಿಕ ಕೀಟನಾಶಕಗಳಿಗೆ ಪರ್ಯಾಯವಾಗಿ ಗೋಮೂತ್ರ, ಬೇವಿನ ಕಷಾಯ, ಬೇವಿನ ಹಿಂಡಿ, ಬೆಳ್ಳೊಳ್ಳಿ-ಹಸಿ ಮೆಣಸಿನಕಾಯಿಯ ರಸ, ಮದುಗುಣಕಿ (ದತುರಾ) ಲ್ಯಾಂಟೀನಾ, ಪಾರ್ಥೇನೀಯಮ ಇನ್ನು ಹಲವಾರು ಕಸಗಳಿಂದ ರಸ ತೆಗೆದು ಕೀಟಗಳ ನಿಯಂತ್ರಣಕ್ಕಾಗಿ ಉಪಯೋಗಿಸುತ್ತಿದ್ದಾರೆ. ತೋಟಗಾರಿಕಾ ಬೆಳೆಗಳನ್ನು ಬೆಳೆಯಲು ಆರಂಭಿಸಿದ್ದು, ತೋಟಗಾರಿಕೆ ಇಲಾಖೆಯಿಂದ ಸುಜಲಾ-III ಯೋಜನೆಯಡಿ 160 ಪೇರಲ ಹಾಗೂ 130 ಮೂಸಂಬಿ ಗಿಡಗಳನ್ನು ನಾಟಿ ಮಾಡಿದ್ದಾರೆ. ನೀರಾವರಿಗಾಗಿ ಕೊಳವೆ ಬಾವಿಯನ್ನು ಹೂಂದಿದ್ದು, ಅವಶ್ಯಕತೆ ಇದ್ದಾಗ ಡಂಬಳ ಕೆರೆಯಿಂದ ನೀರನ್ನು ಪಡೆಯುತ್ತಿದ್ದಾರೆ.

ಪ್ರಸ್ತುತ ವರ್ಷದಲ್ಲಿ ಈರುಳ್ಳಿ, ಮೆಣಸಿನಕಾಯಿ, ಕೊರಲೆ ಬೆಳೆಗಳನ್ನು ಬೆಳೆದಿದ್ದು, ಎರಡು ಎಕರೆ ಈರುಳ್ಳಿ ಮತ್ತು ಮೆಣಸಿನಕಾಯಿ ಅಂತರ ಬೆಳೆ ಪದ್ದತಿಯಲ್ಲಿ 30 ಕ್ವಿಂಟಲ್ ಈರುಳ್ಳಿ ಮತ್ತು ಐದು ಕ್ವಿಂಟಲ್ ಮೆಣಸಿನಕಾಯಿ ಇಳುವರಿ ಪಡೆದಿದ್ದಾರೆ ಹಾಗೂ ಮೂರು ಎಕರೆಯಲ್ಲಿ ಕೊರಲೆ ಬೆಳೆಯನ್ನು ಬೆಳೆದು ಏಳು ಕ್ವಿಂಟಲ್ ಇಳುವರಿ ಪಡೆದಿದ್ದಾರೆ. ಸಾವಯವ ಮಾರುಕಟ್ಟೆಯಲ್ಲಿ ಪ್ರತಿ ಕ್ವಿಂಟಲ್ ಈರುಳ್ಳಿಗೆ ರೂ. 4800 ರಿಂದ 5000 ಗಳಿಗೆ ಮಾರಾಟ ಮಾಡಿ ಒಟ್ಟು ರೂ. 1.00 ಲಕ್ಷ ಲಾಭವನ್ನು ಈರುಳ್ಳಿ ಬೆಳೆಯಿಂದ ಪಡೆದಿದ್ದಾರೆ. ಇದೇ ರೀತಿ ಪ್ರತಿ ಕ್ವಿಂ. ಮೆಣಸಿನಕಾಯಿಗೆ ರೂ. 20000 ರಿಂದ 22000 ವರೆಗೆ ಮಾರಾಟ ಮಾಡಿ ರೂ. 1.12 ಲಕ್ಷಗಳ ಲಾಭವನ್ನು ಪಡೆದಿದ್ದಾರೆ. ಕೊರಲೆ ಬೆಳೆಯಿಂದ ಪ್ರತಿ ಕ್ವಿಂಟಲ್‌ಗೆ ರೂ. 5000 ರಂತೆ ಒಟ್ಟು ರೂ. 35000 ಗಳನ್ನು ಪಡೆದಿದ್ದಾರೆ.

2017-18 ನೇ ಸಾಲಿನ ಆತ್ಮ ಯೋಜನೆಯಡಿಯಲ್ಲಿ ತಾಲೂಕಾ ಮಟ್ಟದ ಶ್ರೇಷ್ಠ ಕೃಷಿಕ ಸ್ಪರ್ಧೆಯಲ್ಲಿ ಭಾಗವಹಿಸಿ ಸಾವಯವ ಕೃಷಿ ಪದ್ದತಿ ವಿಭಾಗದಲ್ಲಿ ತಾಲೂಕ ಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಇವರ ಸಾಧನೆಗಳು ಇತರೆ ರೈತರಿಗೆ ಪ್ರೇರಣೆಯಾಗಿರುತ್ತವೆ.